ಕರ್ನಾಟಕ ಸರ್ಕಾರ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/5/ಇಸಿಎಸ್(1)/2023

ಆಯುಕ್ತರವರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560001
ದೂ.ಸಂ:080-22200777
E-mail: dte.commissioner@gmail.com

ದಿನಾಂಕ: 17.07.2023

## ಸುತ್ತೋಲೆ

ವಿಷಯ : ಸಿ-20 ಪಠ್ಯಕ್ರಮದ 1/2/3/4/5/6 ನೇ ಸೆಮಿಸ್ಟರ್ ನ CIE (CONTINUOUS INTERNAL EVALUATION) MAKE UP ಕಿರು ಪರೀಕ್ಷೆಗಳನ್ನು ನಡೆಸುವ ಬಗ್ಗೆ.

ಉಲ್ಲೇಖ : Regulations of Diploma Programme for the Curriculum-2020 ಯ ಕಂಡಿಕೆ 14.2 Make Up Examinations.

*-*-*-*

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂದಿಸಿದಂತೆ 1 ರಿಂದ 5ನೇ ಸೆಮಿಸ್ಟರ್ ಸಿ-20 ಪಠ್ಯಕ್ರಮದಲ್ಲಿ 2020-21, 2021-22 ಹಾಗೂ 2022-23 ನೇ ಶೈಕ್ಷಣಿಕ ಸಾಲುಗಳಲ್ಲಿ ಶೇಕಡಾ 40 ಕ್ಕಿಂತ ಕಡಿಮೆ CIE ಅಂಕಗಳಿರುವ ವಿದ್ಯಾರ್ಥಿಗಳಿಗೆ CIE ಅಂಕಗಳನ್ನು Improve ಗೊಳಿಸುವ ಸಂಬಂಧ ಸಂಸ್ಥೆಗಳ ಮಟ್ಟದಲ್ಲಿ ದಿನಾಂಕ: 31.07.2023 ರಿಂದ 08.08.2023 ರ ತನಕ MAKE UP ತರಗತಿಗಳನ್ನು ನಡೆಸಿ ದಿನಾಂಕ:.10.08.2023 ರಿಂದ. 17.08.2023 ರೊಳಗೆ MAKE UP CIE ಕಿರು ಪರೀಕ್ಷೆಗಳನ್ನು ಜರುಗಿಸುವುದು.

6ನೇ ಸೆಮಿಸ್ಟರ್ ನ Internship ಗೆ ಸಂಬಂಧಿಸಿದಂತೆ ಅಗತ್ಯ ಹಾಜರಾತಿಯೊಂದಿಗೆ Log Sheet ಮತ್ತು Internship Certificate ಗಳನ್ನು ಸಲ್ಲಿಸಿದ್ದೂ ಹಾಗೂ Project Work ನಲ್ಲಿ ಹಾಜರಾತಿ ತೃಪ್ತಿಕರವಾಗಿದ್ದೂ, CIE-1 ಅಥವಾ CIE-2 ಅಥವಾ CIE-3 ನಲ್ಲಿ 40%ಗಿಂತ ಕಡಿಮೆ ಅಂಕಗಳು ಬಂದಿದ್ದರೆ ಆಯಾ CIE ಗಳನ್ನು ಮಾತ್ರ ಮೇಲ್ಕಂಡ "MAKE UP CIE" ಸಮಯದಲ್ಲಿ ಉತ್ತಮಪಡಿಸಿಕೊಳ್ಳಲು ಅವಕಾಶವಿರುತ್ತದೆ ಮತ್ತು Improve ಆಗಿರುವ CIE ಗಳಿಗೆ ಸಂಬಂಧಿಸಿದಂತೆ ಎಲ್ಲಾ ದಾಖಲೆಗಳನ್ನು ವಿದ್ಯಾರ್ಥಿಗಳು ಒದಗಿಸುವುದು ಕಡ್ಡಾಯವಾಗಿರುತ್ತದೆ.

MAKE UP CIE ಕಿರು ಪರೀಕ್ಷೆಗಳನ್ನು ನಡೆಸಿದ ನಂತರ ದಿನಾಂಕ:23.08.2023 ರೊಳಗೆ ಕಾರ್ಯದರ್ಶಿಗಳು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು ಇವರಿಗೆ ತಪ್ಪದೆ ವರದಿಯನ್ನು ಸಲ್ಲಿಸಲು ಸೂಚಿಸಲಾಗಿದೆ. ಮುಂದುವರೆದು ಜೂನ್/ ಜುಲೈ 2023ರ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಗಳ ಆಂತರಿಕ ಅಂಕಗಳ ಪರಿವೀಕ್ಷಕರೇ CIE ಆಂತರಿಕ ಅಂಕಗಳನ್ನು ಪರಿಶೀಲಿಸಿ BTE Linx Web Portal ಮೂಲಕ Upload ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಲಾಗಿದೆ.

2022-23ನೇ ಶೈಕ್ಷಣಿಕ ಸಾಲಿನಲ್ಲಿ 1,3 ಮತ್ತು 5ನೇ ಸೆಮಿಸ್ಟರ್ ಗಳಲ್ಲಿ Not Eligible (NE Students) ಆಗಿರುವ ಮತ್ತು ಹಿಂದಿನ ವರ್ಷ MAKE UP CIE ಕಿರುಪರೀಕ್ಷೆಗಳಲ್ಲಿ ಶೇ.40ಕ್ಕಿಂತ ಕಡಿಮೆ CIE ಅಂಕಗಳನ್ನು ಪಡೆದು ಪುನ: Not Eligible (NE Students) ಆಗಿರುವಂತಹ ವಿದ್ಯಾರ್ಥಿಗಳು ಜೂನ್/ಜುಲೈ2023ರ ಸೆಮಿಸ್ಟರ್ ಪರೀಕ್ಷೆಗೆ ಹಾಜರಾಗಲು ಅರ್ಹರಾಗಿರುವುದಿಲ್ಲ ಎಂದು ತಿಳಿಸಲಾಗಿದೆ. ಆದಾಗ್ಯೂ ಯಾವುದೇ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದಲ್ಲಿ ಅಂತಹವರ ಫಲಿತಾಂಶವು ಮಾನ್ಯವಾಗುವುದಿಲ್ಲವೆಂದು ತಿಳಿಸಲಾಗಿದೆ ಮತ್ತು ಅಂತಹ ಲೋಪಗಳಿಂದುಂಟಾಗುವ/ಉದ್ಭವವಾಗುವ ಕಾನೂನಾತ್ಮಕ ತೊಂದರೆಗಳಿಗೆ ಸಂಸ್ಥೆಯ ಪ್ರಾಚಾರ್ಯರು/ ಮುಖ್ಯ ಅಧೀಕ್ಷಕರನ್ನೇ ಹೊಣೆಯಾಗಿಸಲಾಗುವುದೆಂದು ತಿಳಿಸಲಾಗಿದೆ.

ಕಾರ್ಯದರ್ಶಿ

ತಾಂತ್ರಿಕ ಪರೀಕ್ಷಾ ಮಂಡಳಿ

17/7/23

ಇವರಿಗೆ:

ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಗಳ ಪ್ರಾಚಾರ್ಯರುಗಳಿಗೆ - ಮುಂದಿನ ಕ್ರಮಕ್ಕಾಗಿ ಹಾಗೂ ಸೂಚನಾ ಫಲಕದಲ್ಲಿ ಪ್ರಕಟಿಸಿ ವಿದ್ಯಾರ್ಥಿಗಳ ಗಮನಕ್ಕೆ ತರುವ ಸಲುವಾಗಿ.

ಪ್ರತಿ: 1. ಇ-ಆಡಳಿತ ವೆಬ್ ಸೈಟ್ ನಲ್ಲಿ ಪ್ರಕಟಿಸಲು

2. ಗಣಕ ಕೇಂದ್ರ -ಬಿಟಿಇ ಲಿಂಕ್ಸ್ ವೆಬ್ ಪೋರ್ಟಲ್ ನಲ್ಲಿ ಪ್ರಕಟಿಸಲು

3. ಇಎಪಿ ವಿಭಾಗಕ್ಕೆ - ಮಾಹಿತಿಗಾಗಿ 4. ಸಾರ್ವಜನಿಕ ಸಂಪರ್ಕಾಧಿಕಾರಿ-ಮಾಹಿತಿಗಾಗಿ